ಉ) ಇಲ್ಲ

ಊ) ಉದ್ಭವಿಸುವುದಿಲ್ಲ

ಕೆಂಪೇಗೌಡ ಸಾರಿಗೆ ಬಸ್ ನಿಲ್ದಾಣದಲ್ಲಿ ಕ್ಯೂ ಪದ್ಧತಿ ಜಾರಿಗೆ ತರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 32(164)

ಸದಸ್ಯರ ಹೆಸರು ಶ್ರೀ ರಾಮಲಿಂಗಾರೆಡ್ಡಿ(ಜಯನಗರ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಬೆಂಗಳೂರಿನ ಕೆಂಪೇಗೌಡ ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರತಿದಿನ ವಿವಿಧ ಭಾಗಗಳಿಗೆ ಹೋಗುವ ಬಸ್‌ಗಳ ಸಂಖ್ಯೆ ಎಷ್ಟು?

ಆ ಈ ಬಸ್ ನಿಲ್ದಾಣದಲ್ಲಿ ಕ್ಯೂ ಪದ್ಧತಿ ಇಲ್ಲದೇ ಇರುವುದರಿಂದ, ವೃದ್ಧರು, ಹೆಂಗಸರು, ಮಕ್ಕಳು ಬಸ್ ಹತ್ತಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ ಹಾಗಿದ್ದಲ್ಲಿ, ಹೊರಡುವ ಎಲ್ಲಾ ಬಸ್ಸುಗಳಿಗೆ ಕ್ಯೂ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಉತ್ತರ

ಅ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರತಿದಿನ ನಗರದ ವಿವಿಧ ಭಾಗಗಳಿಗೆ 1102 ಬಸ್ಸುಗಳನ್ನು 7705 ಸುತ್ತುವಳಿಗಳೊಂದಿಗೆ ಆಚರಣೆ ಮಾಡುತ್ತಿದೆ

ಆ ಈ ನಿಲ್ದಾಣದಲ್ಲಿ 25 ಪ್ಲಾಟ್‌ಫಾರಂಗಳಿದ್ದು, ಈ ಫ್ಲಾಟ್‌ಫಾರಂಗಳಲ್ಲಿ ಸ್ಥಳವಕಾಶ ಸಾಕಷ್ಟು ವಿಶಾಲವಾಗಿಲ್ಲದೆ ಇರುವುದರಿಂದ, ನಗರದ ವಿವಿಧ ಭಾಗಗಳಿಗೆ ಆಚರಣೆಯಾಗುವ ಹಲವಾರು ಮಾರ್ಗಗಳನ್ನು ಒಂದೇ ಪ್ಲಾಟ್‌ಫಾರಂಗೆ ಕೂಡಿಸಿ ಆಚರಣೆ ಮಾಡುವ ಸ್ಥಿತಿ ಇರುವ ಕಾರಣ ಪ್ಲಾಟ್ ಫಾರಂಗಳಲ್ಲಿ ಕ್ಯೂ ವದ್ಧತಿಯನ್ನು ಅನುಸರಿಸುವುದು ಕಷ್ಟಸಾಧ್ಯ ಆದಾಗ್ಯೂ ಪ್ರಾಯೋಗಿಕವಾಗಿ ಪ್ಲಾಟ್ ಫಾರಂ ನಂ 1

ಮತ್ತು 2 ರಲ್ಲಿ ಆರ್ ಪಿ ಸಿ ಲೇಔಟ್ ಮತ್ತು ವಿಜಯನಗರದ ಕಡೆ ಹೋಗುವ ಬಸ್ಸುಗಳಿಗೆ ಕ್ಯೂ ಪದ್ಧತಿಯನ್ನು ಅಳವಡಿಸಲಾಗಿದೆ ಕ್ಯೂ ವದ್ಧತಿಗೆ ಪ್ರಯಾಣಿಕರ ಸಹಕಾರವೂ ಅತ್ಯಗತ್ಯವಾಗಿದ್ದು, ಪ್ರಯಾಣಿಕರ ಸಹಕಾರವನ್ನು ಮತ್ತು ಪ್ಲಾಟ್ ಫಾರಂಗಳಲ್ಲಿ ನ್ಥಳಾವಕಾಶದ ಲಭ್ಯತೆಯನ್ನು ಅನುಸರಿಸಿ ಕ್ಯೂ ನದ್ಧತಿಯನ್ನು ಇತರ ಪ್ಲಾಟ್ ಫಾರಂಗಳಿಗೆ ವಿಸ್ತರಿನಲಾಗುವುದು

ವೃದ್ಧರು, ಹೆಂಗಸರು ಮತ್ತು ಮಕ್ಕಳು ಇತ್ಯಾದಿಯವರಿಗೆ ಬಸ್ಸುಗಳಿಗೆ ಹತ್ತಿ ಇಳಿಯಲು ಸಹಾಯ ಮಾಡುವಂತೆ ಚಾಲಕ ನಿರ್ವಾಹಕರಿಗೆ, ಸಂಚಾರ ನಿಯಂತ್ರಕರಿಗೆ ಸಂಚಾರ ನಿರೀಕ್ಷಕರಿಗೆ ಮತ್ತು ನಿಲ್ದಾಣಾಧಿಕಾರಿಗಳಿಗೆ ತರಬೇತಿ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿದೆ

ಇ ಮೇಲ್ಕಂಡ ಉತ್ತರದ ಹಿನ್ನಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚಿಕ್ಕಬಳ್ಳಾಪುರದಲ್ಲಿರುವ ಕಾರಾಗೃಹವನ್ನು ದೊಡ್ಡದಾಗಿ ವಿಸ್ತರಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯೆ 37(497)

ಸದಸ್ಯರ ಹೆಸರು ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ ವಿ (ಚಿಕ್ಕಾಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನಖರ್ಗೆ(ಗೃಹ ಸಚಿವರು)

ಪ್ರಶ್ನೆ

1) ಚಿಕ್ಕಾಬಳ್ಳಾಪುರದಲ್ಲಿರುವ ಜೈಲು ಚಿಕ್ಕದಾಗಿದ್ದು ಅಲ್ಲಿನ ಕೈದಿಗಳಿಗೆ ಬಹಳ ಇಕ್ಕಟ್ಟು ಹಾಗೂ ಬಿಸಿಲಿಲ್ಲದೇ ಆರೋಗ್ಯ ಕೆಡುತ್ತಿದ್ದು, ಅದರಿಂದ ನಗರದ ಹೊರ ವಲಯದಲ್ಲಿ ದೊಡ್ಡದಾಗಿ ಕಾರಾಗೃಹ ಕಟ್ಟಿಸಲು ಹಾಗೂ ಗೃಹ ರಕ್ಷಕ ದಳದವರಿಗೆ ಕಛೇರಿ ಹಾಗೂ ತರಬೇತಿಗೆ ನಿವೇಶನ ಹಾಗೂ ಕಟ್ಟಡ ಕಟ್ಟಲು ನಗರ ಸಭೆಯಿಂದ ನಿವೇಶನಗಳನ್ನು ಮಂಜೂರು ಮಾಡಿಸಿ ದೊಡ್ಡ ಜೈಲು ನಿರ್ಮಾಣ ಮಾಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

1) ಚಿಕ್ಕಬಳ್ಳಾಪುರದಲ್ಲಿ ನೂತನ ಜೈಲು ನಿರ್ಮಾಣ ಮಾಡಲು ಕಂದಾಯ ಇಲಾಖೆಯವರು ಪ್ರಸ್ತಾಪಿಸಿದ ಎರಡು ಸರ್ಕಾರಿ ಜಮೀನುಗಳನ್ನು ಪರಿವೀಕ್ಷಿಸಲಾಗಿ ಅವು ತಗ್ಗುದಿಣ್ಣೆಗಳು, ಬೆಟ್ಟ ಗುಡ್ಡಗಳಿಂದ ದೊಡ್ಡದಾದ ಕಲ್ಲು ಬಂಡೆಗಳು ಹಾಗೂ ಇನ್ನಿತರೇ